ಪಡಿತರ ಚೀಟಿ ಪಡೆಯಲು EPIC ಹಾಗೂ UID ಸಂಖ್ಯೆ

2800 (2985), ಶ್ರೀ ಹಾಲಾಡಿ ಶ್ರೀನಿವಾಸ್ ಶೆಟ್ಟಿ (ಕುಂದಾಪುರ)

ಅ) ಪಡಿತರ ಚೀಟಿದಾರರು ಪಡಿತರ ಪಡೆಯಲು, ಪಡಿತರ ಚೀಟಿದಾರರ ಮೊಬೈಲ್ ಸಂಖ್ಯೆ EPIC ಹಾಗೂ UID ಸಂಖ್ಯೆಯನ್ನು ನಮೂದಿಸಿ ಸಂಬಂಧಪಟ್ಟ ಸಂಖ್ಯೆಗೆ ಎಸ್.ಎಂ.ಎಸ್. ಕಳುಹಿಸಬೇಕು. ಈ ಪದ್ಧತಿ ಪಡಿತರ ಚೀಟಿದಾರರು ಅನುಸರಿಸದೇ ಇದ್ದಲ್ಲಿ, ಮುಂದಿನ ತಿಂಗಳಿನಿಂದ ಪಡಿತರ ತಡೆಹಿಡಿಯಲಾಗುವುದೆಂದು ಪತ್ರಿಕೆಯಲ್ಲಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಗ್ರಾಮೀಣ ಜನರಿಗೆ ಈ ಪದ್ಧತಿ ಅನುಸರಿಸಲು ಕಷ್ಟವಾಗಿ, ಪಡಿತರ ಪಡೆಯಲು ಸಾಧ್ಯವಾಗದೇ ಪಡಿತರದಿಂದ ವಂಚಿತರಾಗುವುದನ್ನು ತಪ್ಪಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ದಿನೇಶ್ ಗುಂಡೂರಾವ್ (ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು)

ಅ) ನಕಲಿ/ಬೋಗಸ್ ಕಾರ್ಡ್‌ಗಳನ್ನು ರದ್ದು ಪಡಿಸಲು ಸರ್ಕಾರವು ಹಲವಾರು ಕ್ರಮ ಕೈಗೊಳ್ಳುತ್ತಿದೆ. ಈ ನಿಟ್ಟಿನಲ್ಲಿ ಪಡಿತರ ಚೀಟಿದಾರರು ಪಡಿತರ ಪಡೆಯಲು, ಪಡಿತರ ಚೀಟಿದಾರರ ಮೊಬೈಲ್ ಸಂಖ್ಯೆ, EPIC ಹಾಗೂ UID ಸಂಖ್ಯೆಯನ್ನು ನಮೂದಿಸಿ ಸಂಬಂಧಪಟ್ಟ ಸಂಖ್ಯೆಗೆ ಎಸ್.ಎಂ.ಎಸ್. ಕಳುಹಿಸಬೇಕೆಂದು ಸೂಚಿಸಲಾಗಿದೆ. ಈ ಪದ್ಧತಿಯನ್ನು ಪಡಿತರ ಚೀಟಿದಾರರು ಅನುಸರಿಸದೇ ಇದ್ದಲ್ಲಿ, ಮುಂದಿನ ತಿಂಗಳಿನಿಂದ ಪಡಿತರ ತಡೆಹಿಡಿಯಲಾಗುವುದೆಂದು ಪತ್ರಿಕೆಗಳಲ್ಲಿ ತಿಳಿಸಿರುವುದಿಲ್ಲ. ಎಸ್.ಎಂ.ಎಸ್. ಮೂಲಕ ಮಾಹಿತಿ ಸಲ್ಲಿಸಲು ಇನ್ನು ಅವಕಾಶವಿರುತ್ತದೆ.

ಆ) ಮೊಬೈಲ್ ಫೋನ್ ಹೊಂದದೇ ಇರುವವರು ಹತ್ತಿರದ ಅರ್ಜಿ ಕೇಂದ್ರಗಳಾದ ಗ್ರಾಮ ಪಂಚಾಯಿತಿ ಕಛೇರಿ, ಬೆಂಗಳೂರು

ಒನ್/ಕರ್ನಾಟಕ ಒನ್ ಕೇಂದ್ರಗಳಲ್ಲಿ ಎಪಿಕ್/ಆಧಾರ್ ಸಂಖ್ಯೆಗಳನ್ನ ನೋಂದಾಯಿಸಬಹುದಾಗಿದೆ. ಇದರಿಂದಾಗಿ ಮೊಬೈಲ್ ಹೊಂದಿಲ್ಲದ ಪಡಿತರ ಚೀಟಿದಾರರಿಗೆ ಯಾವುದೇ ಸಮಸ್ಯೆ ಉಂಟಾಗುವುದಿಲ್ಲ. ಪಡಿತರ ಚೀಟಿದಾರು ಸ್ವಂತ ಮೊಬೈಲ್ ಹೊಂದಲೇ ಬೇಕೆಂಬ ನಿರ್ಬಂಧವನ್ನು ಎಲ್ಲಿಯೂ ಸಹ ವಿಧಿಸಿರುವುದಿಲ್ಲ.

ಕ್ಯಾನ್ಸರ್ ಮತ್ತು ಕಿಡ್ನಿ ಡಯಾಲಿಸಿಸ್ ರೋಗಿಗಳಿಗೆ ಉಚಿತ ಚಿಕಿತ್ಸೆ

2801 (2986), ಶ್ರೀ ಹಾಲಾಡಿ ಶ್ರೀನಿವಾಸ್ ಶೆಟ್ಟಿ (ಕುಂದಾಪುರ)

ಅ) ಇತ್ತೀಚೆಗೆ ಕ್ಯಾನ್ಸರ್ ಮತ್ತು ಕಿಡ್ನಿಗೆ ಸಂಬಂಧಿಸಿದ ಕಾಯಿಲೆಗಳು ಜಾಸ್ತಿಯಾಗುತ್ತಿದ್ದು, ಚಿಕಿತ್ಸೆಗೆ ಹಣ ಹೊಂದಿಕೊಳ್ಳಲು ಸಾಧ್ಯವಾಗದೇ ಬಡ ರೋಗಿಗಳು ಮರಣ ಹೊಂದುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಕ್ಯಾನ್ಸರ್ ಕಾಯಿಲೆ ಮತ್ತು ಕಿಡ್ನಿ ಡಯಾಲಿಸಿಸ್ ರೋಗಿಗಳಿಗೆ ಉಚಿತವಾಗಿ ಚಿಕಿತ್ಸೆ ನೀಡುವ ಉದ್ದೇಶ ಹೊಂದಿದೆಯೇ?

ಡಾ: ಶರಣಪ್ರಕಾಶ್ ಆರ್.ಪಾಟೀಲ್ (ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು)

ಅ) ಹೌದು.

ಆ) ಕ್ಯಾನ್ಸರ್ ಕಾಯಿಲೆಗೆ ಸಂಬಂಧಿಸಿದಂತೆ ಬೆಂಗಳೂರಿನ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಬಡರೋಗಿಗಳಿಗೆ ಚಿಕಿತ್ಸೆಗಾಗಿ ಬಿಪಿಎಲ್ ಕಾರ್ಡ್ ಹೊಂದಿದವರಿಗೆ ವಾಜಪೇಯಿ ಆರೋಗ್ಯಶ್ರೀ, ಆರೋಗ್ಯ ಭಾಗ್ಯ, ಯಶಸ್ವಿನಿ ಹಾಗೂ ಎನ್.ಪಿ.ಸಿ.ಡಿ.ಸಿ.ಎಸ್. ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಎಸ್.ಸಿ.ಪಿ. ಹಾಗೂ ಟಿ.ಎಸ್.ಪಿ. ಯೋಜನೆಯಡಿ